ಶ್ರೀ ಬಿ. ಎಲ್. ಗೌಡ.—ಯಾವ ಯಾವ ಜಿಲ್ಲೆಯಲ್ಲಿ ಗ್ರಾಮಪಂಚಾಯಿತಿಗಳವರು ಈ ಗ್ರಾಮಾಂತರ ನೀರು ಸರಬರಾಜು ಯೋಜನೆಗೆ ಅವರ 10 ಪರ್ಸೆಂಟ್ ಕೋಟ ಹಣವನ್ನು ಕೊಟ್ಟು ದ್ದಾರೋ ಅಂಥ ಕಡೆ ಅಂಕೆಗಳು ಹೆಚ್ಚಿಗೆ ಕಾಣುತ್ತಿರಬಹುದು ಅಷ್ಟೆ. ಆದರೆ ಯಾರಿಗೂ ತಾರತಮ್ಯ ತೋರಿಸಿಲ್ಲ. ಮೊದಲು ಹಣವನ್ನು ಕೊಡತಕ್ಕವರಿಗೆ ಮೊದಲು ಮಂಜೂರು ಮಾಡುತ್ತೇವೆ.

ಶ್ರೀ ಎಂ. ನಾಗಪ್ಪ.—ರಾಯಚೂರು ಜಿಲ್ಲೆಯಲ್ಲಿ ಬಾವಿ ತೆಗೆದರೂ ನೀರು ಸಿಕ್ಕುವುದು ಬಹಳ ಕಷ್ಟ. ಅಂಥ ಕಡೆಗೆ ಸರ್ಕಾರದವರು ಹೆಚ್ಚಿನ ಪ್ರಾಶಸ್ತ್ಯ ಕೊಡುವುದು ಬೇಡವೇ ?

ಶ್ರೀ ಬಿ. ಎಲ್. ಗೌಡ.—ರಾಯಚೂರು ಜಿಲ್ಲೆಯಿಂದ 22 ಅರ್ಜಿಗಳು ಬಂದಿವೆ. ಅವರು ತಮ್ಮ ಭಾಗದ 10 ಪರ್ಸೆಂಟ್ ಕಂಟ್ರಿಬ್ಯೂಷನ್ ಹಣವನ್ನು ಕಟ್ಟಿದರೆ ಮಂಜೂರು ಮಾಡುತ್ತೇವೆ.

Sri D. B. KALMANKAR.—May I know what are the criteria in sanctioning these works ?

Sri B. L. GOWDA.—The criteria are, scarcity of drinking water in a particular village, ability of the panchayat to maintain these water works and the ability of the panchayat to pay 10 per cent of the total cost.

ಶ್ರೀ ಪಿ. ವೆಂಕಟಗಿರಿಯಪ್ಪ.—ನ್ಯಾಷನಲ್ ರೂರಲ್‌ವಾಟರ್ ಸಪ್ಲೈ ಸ್ಕೀಮು ಕೇವಲ ಗುಲ್ಬರ್ಗ, ರಾಯಚೂರು ಮತ್ತು ಬೀದಾರಿಗೆ ಸಂಬಂಧಪಟ್ಟಿದ್ದೋ ! ಬೇರೆ ಜಿಲ್ಲೆಗೆ ಅದನ್ನು ಏಕೆ ಅನ್ವಯ ಮಾಡಲಲ್ಲ ! ಶಕ್ತ ಇಲ್ಲದ ಪಂಚಾಯಿತಿಗಳಿಗೆರ್ಲಾ ಅದನ್ನು ಅನ್ವಯಿಸಿ ಅದರಿಂದ ಅಗತಕ್ಕ ಲುಕ್ಸಾನಿಗೆ ಯಾರು ಹೊಣೆ ?

ಅಧ್ಯಕ್ಷರು.—ಆ ಪ್ರಶ್ನೆ ಇದರಲ್ಲಿ ಉದ್ಭವವಾಗುವುದಿಲ್ಲ.

ಶ್ರೀ ತಿರುಮಲದೇವರಾಯ.—10 ಪರ್ಸೆಂಟ್ ಹಣವನ್ನು ಕೊಟ್ಟರೆ ಯೋಜನೆಯನ್ನು ಯಾವಾಗ ಮಂಜೂರು ಮಾಡುತ್ತಾರೆ ?

ಶ್ರೀ ಬಿ. ಎಲ್. ಗೌಡ.—ಕೂಡಲೆ ಟೆಂಡರ್ ಕರೆದು ಕೆಲಸವನ್ನು ಸ್ಟಾರ್ಟ್ ಮಾಡುತ್ತೇವೆ.

Mr. SPEAKER.—I put question No. 706

S.S.Ps' Land encroachment agitation at Gundlupet

706 Sri S. GOPALA GOWDA (Thirthahalli).—

Will the Chief Minister be pleased to state :—

(*a*) the number of persons arrested by the Police recently in connection with Samyukutha Socialist Party's land encroachment agitation at Gundlupet;

(*b*) whether police have arrested any person by entering the Party office ?

Sri VEERENDRA PATIL (Chief Minister).—

(*a*) 132 persons.

(*b*) No.

Sri B. B. SAYANAK.—May I know when were these 132 persons arrested and under what provision of law ?

† Sri VEERENDRA PATIL.—They were arrested under different sections 143, 149, 447, 34, etc., of the I. P. C. They were arrested on: 5-12-69, 18-12-69, 19-12-69, 11-12-69, 31-12-69 and 18-1-70.

ಶ್ರೀ ಎಂ. ನಾಗಪ್ಪ.—ರೋಕರ್ ಪೋಲೀಸಿಗೆ ಅರ್ಜಿಕೊಟ್ಟಿದ್ದ ಸಂಬಂಧದಲ್ಲಿ ಸರ್ಕಾರದ ಮನೇನಾದರೂ ತಮ್ಮ ಕಡೆಯಿಂದ ಅಧಿಕಾರಿಗಳನ್ನು ಕಳುಹಿಸಿ ವಿಚಾರಣೆ ಮಾಡಿಸಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀರ್.—ಆ ವಿಚಾರ ಈಗ ನನ್ನ ಮುಂದೆ ಇಲ್ಲ.

ಶ್ರೀ ಎನ್. ಎ. ಚನ್ನೇಗೌಡ.—ಇಲ್ಲಿ ಭೂ ಅಕ್ರಮಣಕಾರರೆಂದು ಹೇಳಿರುವವರು ಸರ್ಕಾರದ ಪರ ಜಮೀನನ್ನು ಅಕ್ರಮಿಸಿದ್ದಾರೋ ಅಥವಾ ಹಿಡುವಳಿದಾರರ ಜಮೀನನ್ನು ಅಕ್ರಮಣ ಮಾಡಿದ್ದಾರೋ ?

ಶ್ರೀ ವೀರೇಂದ್ರ ಪಾಟೀರ್.—ಅವರು ಅಕ್ರಮಣಮಾಡಿರುವುದು ಸರ್ಕಾರಿ ಜಮೀನು-ಅರಣ್ಯ ಬಾಬಿಗೆ ಸೇರಿರತಕ್ಕ ಜಮೀನು. ಅದನ್ನು ಅವರು ಎನ್‌ಕ್ರೋಚ್ ಮಾಡಿದ್ದರು. ಆದ್ದರಿಂದ ಅವರ ಮೇಲೆ ಕೇಸ್ ಹಾಕಲಾಗಿದೆ.

ಶ್ರೀ ಎಂ. ಹೆಡ್. ಜಯಪ್ರಕಾಶ ನಾರಾಯಣ್.—ಭೂಹೀನರಾಗಿರತಕ್ಕವರಿಗೆ ಕಳೆದ ಇಪ್ಪತ್ತು ವರ್ಷಗಳಿಂದಲೂ ಭೂಮಿಯನ್ನು ಕೊಡುವೇ ಇರುವುದರಿಂದ ಅವರೇ ಮುಂದೆ ಬಂದು ಭೂಮಿಯನ್ನು ಅಕ್ರಮಿಸಿಕೊಳ್ಳುವುದು ತಪ್ಪಾಗುತ್ತದೆ ಎಂದು ಭಾವಿಸಿದ್ದೀರಾ ? ಭೂಹೀನರಿಗೆ ವಿರೋಧವಾಗಿ ಕೆಲಸ ಮಾಡಿದಂತಾಗುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀರ್.—ಭೂಹೀನರು ಎಂದು ಇರುವವರು ಕಾನೂನುಭಂಗ ಚಳುವಳಿ ಮಾಡಿದರೆ ಕಾನೂನು ಪ್ರಕಾರ ಅವರು ಶಿಕ್ಷೆಗೆ ಒಳಗಾಗುತ್ತಾರೆ. ಭೂ ಹೀನರು ಸರಕಾರದಿಂದ ಭೂಮಿ ಪಡೆಯಲು ಬೇರೆ ಕಾಯಿದೆ ಇದೆ. ಇದರ ಪ್ರಕಾರ ಸರಕಾರಕ್ಕೆ ಅರ್ಜಿ ಹಾಕಿ ಪಡೆಯಬಹುದು. ಇದನ್ನು ಬಿಟ್ಟು ತಮ್ಮ ಕೈಯಲ್ಲೇ ಎಲ್ಲಾ ಅಧಿಕಾರವಿದೆ ಎಂದು ಕಾನೂನನ್ನು ಮುರಿಯಲು ಪ್ರಯತ್ನ ಮಾಡಿದರೆ ಅವರು ಶಿಕ್ಷೆಗೆ ಒಳಗಾಗುತ್ತಾರೆ.

ಶ್ರೀ ಹಂಜೀ ಶಿವಣ್ಣ.—ಭೂಮಿಯನ್ನು ಅಕ್ರಮಣ ಮಾಡಿಕೊಂಡಿರುವ ಕಡೆಗಳಲ್ಲಿ ಅದು ಸಾಗು ಮಾಡಲು ಯೋಗ್ಯವಾಗಿದೆಯೇ, ಇಲ್ಲವೇ ? ಸಾಗು ಮಾಡಲು ಯೋಗ್ಯವಾಗಿದ್ದ ಪಕ್ಷದಲ್ಲಿ ಅಂತಹ ಭೂಮಿಯನ್ನು ಈ ಭೂ ಹೀನರಿಗೇಕೆ ಕೊಡಬಾರದು ?

ಶ್ರೀ ವೀರೇಂದ್ರ ಪಾಟೀರ್.—ಇವೆಲ್ಲಾ ಫಾರಸ್ಟ್ ರ್ಯಾಂಡುಗಳೇ ಆಗಿವೆ. ಕೆಲವೊಂದು ಕಡೆ ಭೂ ಹೀನರಿಗೆ ಫಾರಸ್ಟ್ ರ್ಯಾಂಡು ಕೊಡಲು ಪ್ರಯತ್ನ ಮಾಡಲಾಗಿದೆ. ಆದರೆ ಭೂಮಿಯನ್ನು ಹಂಚಲಿಕ್ಕೆ ಬೇರೆ ಕಾಯಿದೆ ಇದೆ ಮತ್ತು ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಇದಕ್ಕೆ ಪ್ರತ್ಯೇಕವಾದ ರ್ಯಾಂಡು ಗ್ರಾಯಿಟು ಕಮಿಟಿಕೂಡ ಅಲ್ಲಲ್ಲಿ ಅಸ್ತಿತ್ವಕ್ಕೆ ಬಂದಿದೆ. ಇದರಂತೆ ಸರಕಾರ ಭೂಮಿ ಇಲ್ಲದವರಿಗೆ ಭೂಮಿ ಕೊಡಬೇಕೆಂದು ನಿರ್ಣಯ ಕೂಡ ಮಾಡಲಾಗಿದೆ ಮತ್ತು ಈಗಾಗಲೇ ಕೆಲವು ಕಡೆ ಭೂಮಿಯನ್ನು ಹಂಚುವ ಕಾರ್ಯಕ್ರಮವನ್ನೂ ತೆಗೆದುಕೊಂಡಿದ್ದಾರೆ. ಈಗ ನಮ್ಮಲ್ಲಿ ಇರುವ ಫಾರಸ್ಟ್ ರ್ಯಾಂಡೇ ಕಡಿಮೆ. ಇಂತಹ ಫಾರಸ್ಟ್ ರ್ಯಾಂಡನ್ನು ಕಾನೂನಿಗೆ ವಿರುದ್ಧವಾಗಿ ಅಕ್ರಮಣ ಮಾಡಿಕೊಂಡರೆ ಅದು ಸರಿಯಲ್ಲ. ಅಂತಹವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಶರಣಗೌಡ ಇನಾಂದಾರ್.—ತಮಗೆ ಗೊತ್ತಿರುವ ಹಾಗೆ ಅನೇಕ ಜವಾಬ್ದಾರಿ ಸ್ಥಾನಗಳಲ್ಲಿರುವ ಕೇಂದ್ರ ಸರಕಾರದ ಮಂತ್ರಿಗಳೇ ಆಗಲೀ ರಾಜ್ಯ ಸರಕಾರದ ಮಂತ್ರಿಗಳೇ ಆಗಲೀ ಸರಕಾರಿ ಭೂಮಿಯನ್ನು ಎಲ್ಲೆಲ್ಲಿ ಉಪಯೋಗ ಮಾಡಿಲ್ಲವೋ ಅಂತಹ ಕಡೆಗಳಲ್ಲಿ ಜನರೇ ಉಪಯೋಗಮಾಡಬಹುದು ಎಂದು ಹೇಳುತ್ತಾರೆ. ಇಂತಹ ಸಂದರ್ಭದಲ್ಲಿ ಇವರು ಭೂಮಿಯನ್ನು ಅಕ್ರಮಣಮಾಡಿಕೊಂಡಿದ್ದಾರೆಂದು ಅವರ ಮೇಲೆ ಪೋಲೀಸಿನವರು ಕೇಸು ಹಾಕುತ್ತಾರೆ. ಜವಾಬ್ದಾರಿ ಸ್ಥಾನದಲ್ಲಿರುವವರು ಪ್ರೋತ್ಸಾಹ ಮಾಡುವುದರಿಂದ ಇದು ಕಾನೂನಿಗೆ ವಿರೋಧವಾಗುವುದಿಲ್ಲ ಎನ್ನುವುದನ್ನು ಸರಕಾರ ಒಪ್ಪಲು ತಯಾರಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಜವಾಬ್ದಾರಿ ಸ್ಥಾನದಲ್ಲಿರುವವರು ಹೇಳುವುದರಿಂದ ಹೀಗಾಗಿವೆ ಎಂದು ಹೇಳುತ್ತಾರೆ. ನನಗೆ ಇದರ ಬಗ್ಗೆ ಗೊತ್ತಿಲ್ಲ ಮತ್ತು ನನ್ನ ಮುಂದೆ ಇಂತಹ ಇನ್‌ಫರ್‌ಮೇಷನ್ ಕೂಡ ಇಲ್ಲ. ಜವಾಬ್ದಾರಿ ಸ್ಥಾನದಲ್ಲಿರುವ ಮಂತ್ರಿಯೇ ಇರಲಿ ಇಲ್ಲವೇ ಯಾರೇ ಇರಲಿ ಅವರುಗಳು ಕಾನೂನು ಬಿಟ್ಟು ಹೋಗಿ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ ಮತ್ತು ಈ ತರಹದ ಹೇಳಿಕೆಯಿಂದ ಸಾರ್ವಜನಿಕರಲ್ಲಿ ಅರಿವು ಇಲ್ಲದಿರುವುದನ್ನು ಅರಿತು ಇಲ್ಲಿ ಮಾತನಾಡಬೇಕಾಗುತ್ತದೆ. ಸುಮ್ಮನೆ ಬೇಜವಾಬ್ದಾರಿಯಿಂದ ಮಾತನಾಡಿದರೆ ಅದರಿಂದೇನೂ ಆಗುವುದಿಲ್ಲ.

Sri D. B. KALMANKAR.—May I know how many acres are encroached upon by these persons and out of them how many are forest lands and how many are other Government lands ?

Sri VEERENDRA PATIL.—I said that they have no right to occupy any land. Because of some agitation they occupied some forest land. There is no question of their occupying and being in possession of the land.

Sri G. CHANDRAKANTH.—Occupying the land, whether it is in forest area or any other area, by landless agriculturists and landless labourers is in practice for the last 25 years. When that is so what is the wrong committed by them ? Therefore, will the Government see that all the land occupied is distributed to them immediately and then action taken as per law ? This is the slogan of the Central Government and also the State Governments.

Sri VEERENDRA PATIL.—I do not think any State Government or the Central Government has said it any time that all the forest land that is available in the country should be distributed among the landless people. I said that these people should not have occupied the lands unauthorisedly and that these forest lands cannot be released. Even if we come to a conclusion that it is a forest land and nothing could be grown on these lands, the land has to be released by the Revenue Department. There is some prescribed procedure to be followed for distributing the land among the landless people.

ಶ್ರೀ ಎಸ್. ಶಿವಪ್ಪ.—ಕಾಂಗ್ರೆಸ್ಸು ಸರಕಾರದವರು ಅವರಿಗೆ ಬೇಕಾದ ಮಿತ್ರರುಗಳು ಭೂಮಿಯನ್ನು ಕೇಳಿದಾಗ ಸುಮಾರು ಎರಡು ಲಕ್ಷದಿಂದ ಐದು ಲಕ್ಷ ಎಕರೆಯವರೆಗೆ ಬೆಟ ಬಾಳತಕ್ಕ ಭೂಮಿಯನ್ನು ಕಾಂಗ್ರೆಸ್ಸು ಎಕ್ಸಿಬಿಷನ್ ಮಾಡುವುದಕ್ಕೆ ಹಾಗೂ ಸ್ಮಾರ್ ಸ್ಕೇಲ್ ಇಂಡಸ್ಟ್ರೀಗಳನ್ನು ಮಾಡುವುದಕ್ಕಾಗಿ ಹಂಚಿದ್ದಾರೆ ಅದರೆ ಭೂಮಿ ಇಲ್ಲದವರಿಗೆ ಭೂಮಿಯನ್ನು ಹಂಚುತ್ತಿಲ್ಲ. ಹೊಟ್ಟೆಗಿಲ್ಲದೆ ಬೀದಿ ಭಿಕಾರಿಗಳಾಗಿರುವ ಜನ ಈ ಸರಕಾರದವರನ್ನು ಕಳೆದ 22 ವರ್ಷಗಳಿಂದಲೂ ಭೂಮಿಕೊಡಿ ಎಂದು ಕೇಳಿದರೂ ಕೊಡಲಿಲ್ಲ. ಇದಕ್ಕೆ ಅವರ ವಿರೋಧವನ್ನು ತೋರಿಸುವುದಕ್ಕೋಸ್ಕರ ಚಳುವಳಿ ಮಾಡಿ ಭೂಮಿಯನ್ನು ಪಡೆದರೆ ಅದು ಕಾನೂನಿಗೆ ವಿರೋಧ ಎಂದು ಭಾವಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—22 ವರ್ಷಗಳಿಂದಲೂ ಯಾವ ಭೂಮಿಯನ್ನೂ ಹಂಚಲಿಲ್ಲ ಎನ್ನುವ ಮಾತನ್ನು ನಾನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಸಾವಿರಾರು ಎಕರೆಗಳು ಇರುವ ಭೂಮಿಯನ್ನು ನಮ್ಮ ರಾಜ್ಯದ ಜನ ಕೇಳಿದಾಗ ಹಂಚಿದ್ದೇವೆ. ಇದನ್ನು ಲ್ಯಾಂಡು ಗ್ರಾಂಟು ರೂಲ್ಸ್ ಪ್ರಕಾರ ಅಲ್ಲಲ್ಲಿ ಹಂಚಲಾಗಿದೆ. ಪ್ರತಿಯೊಬ್ಬರಿಗೂ ಈಗ ಲ್ಯಾಂಡು ಹಂಗರ್ ಜಾಸ್ತಿಯಾಗಿದೆ ಎಂದು ಎಲ್ಲರಿಗೂ ಜಮೀನನ್ನು ಪೂರ್ತಿಯಾಗಿ ಹಂಚಬೇಕು ಎಂದರೆ ಎಲ್ಲರಿಗೂ ಹಂಚುವುದಕ್ಕಾಗುವುದಿಲ್ಲ ಮತ್ತು ಈ ರೀತಿಯ ಜವಾಬ್ದಾರಿ ತೆಗೆದುಕೊಳ್ಳುವುದು ಬಹಳ ಕಷ್ಟ. ಕಾಂಗ್ರೆಸ್ಸು ಪಕ್ಷದ ಎಕ್ಸಿಬಿಷನ್ನಿಗೆ ಯಾವ ಭೂಮಿಯನ್ನೂ ಬೇಕು ಎಂದು ಸರಕಾರದವರನ್ನು ಕೇಳಿಲ್ಲ ಮತ್ತು ಸರಕಾರ ಯಾವ ಭೂಮಿಯನ್ನೂ ಗ್ರಾಂಟು ಮಾಡಿಲ್ಲ, ಪೊಲಿಟಿಕಲ್ ಸಫರರ್‌ಗಳು ಎಂದು ಸರಕಾರದಲ್ಲಿ ಭೂಮಿ ಕೇಳಿದರೆ ಇದಕ್ಕೆ ಇಷ್ಟು ಪರ್ಸೆಂಟು ಕೊಡಬೇಕು ಎಂದು ನಿಯಮಗಳಿವೆ. ಇದರಂತೆ ಡಿನರ್ವಿಂಗ್ ಕೇಸ್‌ಗಳಲ್ಲಿ ಭೂಮಿಯನ್ನು ಹಂಚುತ್ತಾರೆ. ಈಗಾಗಲೇ ಇಂತಹ ಭೂಮಿಯನ್ನು ಎಷ್ಟೋ ಕಡೆ ವಿತರಣೆ ಮಾಡಲಾಗಿದೆ. ಆದರೆ ಎಲ್ಲರಿಗೂ ಸಮಾಧಾನವಾಗುವ ಹಾಗೆ ಭೂಮಿ ಹಂಚಬೇಕು ಎಂದರೆ ಅದನ್ನು ಮಾಡಲು ಆಗುವುದಿಲ್ಲ.